ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 4, January-February, 2024, Pp. 87-92.**
**©*IIMRD*, Mysuru**

IIMRD JOURNALS
**www.iimrd.com**

# ಸಿರಿಯನ್ ಕ್ರೈಸ್ತರು ಒಂದು ಪರಿಚಯ

**ಅನಿಲ್ ವಿ ಚೆರಿಯನ್**

ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ. ಬಲ್ಮಠ ಮಂಗಳೂರು

**ಸಾರಾಂಶ: (Abstract)**

*ಕ್ರೈಸ್ತ ಧರ್ಮವನ್ನು ಭಾರತದಲ್ಲಿ ಸಾಮಾನ್ಯವಾಗಿ ಯುರೋಪಿಯನ್ನರ ಆಡಳಿತದೊಂದಿಗೆ ತಳಕು ಹಾಕಲಾಗಿದೆ. ಆದರೆ ತಮ್ಮ ಅಸ್ಮಿತೆಯ ಉಳಿವಿಗಾಗಿ ಯುರೋಪಿಯನ್ನರ ವಿರುದ್ಧ ಆಯುಧವೆತ್ತಿದ ಕ್ರೈಸ್ತ ಧರ್ಮಾವಲಂಬಿಗಳಾಗಿದ್ದ ಪಂಗಡವೊಂದರ ಪರಿಚಯವೇ ಈ ಲೇಖನದ ಉದ್ದೇಶ. ಓತ್ ಒನ್ ದಿ ಬೆಂಟ್‌ಕ್ರಾಸ್ (oath on the bent cross) ಅಥವಾ ಬಾಗಿದ ಶಿಲುಬೆಯ ಪ್ರತಿಜ್ಞೆ ಎಂದು ಚರಿತ್ರೆಯಲ್ಲಿ ದಾಖಲಾಗಿರುವ, ಪೋರ್ಚುಗೀಸರ ವಿರುದ್ಧದ ಇವರ ನಡೆ ಭಾರತದ ಇತಿಹಾಸದಲ್ಲೇ ಯುರೋಪಿಯನ್ನರ ವಿರುದ್ಧದ ಪ್ರಥಮ ಹೋರಾಟವಾಗಿರುವುದು ಚಾರಿತ್ರಿಕವಾಗಿ ಬಹಳ ವಿಶೇಷವಾದುದು.*

**ಮುಖ್ಯಪದಗಳು (Keywords):** ಭಾರತದ ಇತಿಹಾಸ, ಸಿರಿಯನ್ ಕ್ರೈಸ್ತರು, ಓತ್ ಒನ್ ದಿ ಬೆಂಟ್‌ಕ್ರಾಸ್, ಯುರೋಪ್.

**ಪೀಠಿಕೆ**

ಸಿರಿಯನ್ ಕ್ರೈಸ್ತರು ಎಂದು ಸಾಮಾನ್ಯವಾಗಿ ಕರೆಯಲ್ಪಡುವ; ಯುರೋಪಿಯನ್ನರ ವಿರುದ್ಧ ಆಯುಧವೆತ್ತಿದ ಗುಂಪು ಕೇರಳ ಮೂಲದ ಧಾರ್ಮಿಕ–ಜನಾಂಗೀಯ ಪಂಗಡ. ಸೆರಾ ಕ್ರೈಸ್ತರು, ಮಾರ್‌ತೋಮ ಕ್ರೈಸ್ತರು, ನಸ್ರಾಣಿಗಳು ಮುಂತಾದ ಇತರ ಹೆಸರುಗಳಿಂದಲೂ ಪರಿಚಿತರಾಗಿರುವ ಈ ಪಂಗಡದ ಮೂಲ ಕೇರಳ ರಾಜ್ಯವಾಗಿದ್ದರೂ ಇಂದು ಜಗತಿನಾದ್ಯಂತ ಇವರು ನೆಲೆಸಿರುತ್ತಾರೆ. ಸೆರಾ ಎಂದರೆ ಪೋರ್ಚುಗೀಸ್ ಭಾಷೆಯಲ್ಲಿ ಬೆಟ್ಟ ಎಂದಾಗಿದೆ, ಸಾಮಾನ್ಯವಾಗಿ ಘಾಟ್‌ಗಳ ತಪ್ಪಲುಗಳಲ್ಲಿ ನೆಲೆಸಿರುತಿದ್ದರಿಂದ ಪೋರ್ಚುಗೀಸರು ಇವರನ್ನು ಸೆರಾ ಕ್ರೈಸ್ತರೆಂದು ಕರೆಯುತ್ತಿದ್ದರು ಎಂದು ಊಹಿಸಲಾಗಿದೆ.[1] ನಸ್ರಾಣಿ ಎಂಬುದು ಇವರನ್ನು ಗುರುತಿಸುವ ಇನ್ನೊಂದು ಹೆಸರು. ಇದು ಅರೇಬಿಕ್ ಭಾಷೆಯ ಪದವಾಗಿದ್ದು, ಅರ್ಥ, ಕ್ರೈಸ್ತರು ಎಂದಾಗಿದೆ.[2] ಕಾಲಮಾನಿತವಾದ ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ಭಾರತಕ್ಕೆಕ್ರೈಸ್ತಧರ್ಮವನ್ನು ಪರಿಚಯಿಸಿದವರು ಏಸು ಕ್ರಿಸ್ತರ ಶಿಷ್ಯ ಸಂತ ತೋಮರು, ಸಂತ ತೋಮರಿಂದ ಇವರು ಕ್ರೈಸ್ತ ಧರ್ಮ ಸ್ವೀಕರಿಸಿದ ಕಾರಣದಿಂದಾಗಿ ಈ ಪಂಗಡಿಗರನ್ನು ಮಾರ್‌ತೋಮ ಕ್ರೈಸ್ತರೆಂದೂ ಕರೆಯುತ್ತಾರೆ.[3]

*Please cite this article as:* *ಅನಿಲ್ ವಿ ಚೆರಿಯನ್.* (2024). ಸಿರಿಯನ್ ಕ್ರೈಸ್ತರು ಒಂದು ಪರಿಚಯ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ. 87–92.*

ಐತಿಹ್ಯದ ಪ್ರಕಾರ ಕ್ರಿ.ಶ 52ರಲ್ಲಿ ಸಂತ ತೋಮರು ಕೇರಳದ ಕೊಡುಂಗಲ್ಲೂರು ಬಳಿಯ ಮಲಿಯಂಕರ ಎಂಬ ತೀರ ಪ್ರದೇಶಕ್ಕೆ ಸಮುದ್ರ ಮಾರ್ಗವಾಗಿ ಬಂದವರಾಗಿದ್ದಾರೆ. ಮಲಿಯಂಕರ ಅಥವಾ ಈಗಿನ ಕೊಡುಂಗಲ್ಲೂರು, ಪೆರಿಯಾರ್ ನದಿ ಅರಬಿ ಸಮುದ್ರವನ್ನು ಸೇರುವ ನದಿ ಮುಖಜ ಭೂಮಿಯ ದಡ. ಅವರ ಸಹ ಧರ್ಮಿಯರಾದ ಯಹೂದಿಗಳು ದೊಡ್ಡ ಪ್ರಮಾಣದಲ್ಲಿ ಇಲ್ಲಿ ವಾಸವಾಗಿದ್ದುದೇ[4] ಸಂತ ತೋಮರು ಇಲ್ಲಿಗೆ ಬರಲು ಪ್ರಮುಖ ಆಕರ್ಷಣೆ[5]. ಇಲ್ಲಿ ಸಂತ ತೋಮರು, ಯಹೂದಿಗಳ ಮತ್ತು ಸ್ಥಳೀಯರ, ಮುಖ್ಯವಾಗಿ ನಂಬೂದರಿ ಬ್ರಾಹ್ಮಣರ ನಡುವೆ ಪ್ರವಚನ ನಡೆಸಿ ಹಲವಾರು ಯಹೂದಿಗಳು ಹಾಗೂ ಕಲ್ಲಿ, ಕಲ್ಲಿಯಂಕರ, ಶಂಕರಪುರಿ ಮತ್ತು ಪಗಲೋಮಟ್ಟಂ ಎಂಬ ನಂಬೂದರಿ ಕುಟುಂಬಗಳನ್ನು ತನ್ನ ಶಿಷ್ಯರಾಗಿ ಸ್ವೀಕರಿಸುತ್ತಾರೆ, ಅವರಲ್ಲಿ ಪಗಲೋಮಟ್ಟಂ ಕುಟುಂಬದವರಿಗೆ ಪೌರೋಹಿತ್ವದ ದೀಕ್ಷೆಯನ್ನು ನೀಡುತ್ತಾರೆ, ಕೊಚ್ಚಿನ್ ಮತ್ತು ಟ್ರಾವಾಂಕೊರ್ ಪ್ರದೇಶದ ವಿವಿಧ ಭಾಗಗಳಲ್ಲಿ ಇವರಿಗಾಗಿ ಏಳು ದೇವಾಲಯಗಳನ್ನು ಸ್ಥಾಪಿಸುತ್ತಾರೆ.[6] ತದನಂತರದಲ್ಲಿ ತಮ್ಮ ಕಾರ್ಯ ಚಟುವಟಿಕೆಗಳಿಗಾಗಿ ತಮಿಳುನಾಡಿನ ಮೈಲಾಪುರಿಗೆ ತೆರಳುವ ಅವರು, ಅಲ್ಲಿಯೂ ಒಂದಿಷ್ಟು ಶಿಷ್ಯರನ್ನು ಪಡೆದುಕೊಳ್ಳುತ್ತಾರೆ. ಅಲ್ಲಿ ಸಂತ ತೋಮರ ಧಾರ್ಮಿಕ ಕಾರ್ಯಚಟುವಟಿಕೆಗಳಿಂದ ಸಿಟ್ಟಾಗುವ ಬ್ರಾಹ್ಮಣರ ಗುಂಪೊಂದು ಇವರನ್ನು ಈಟಿಯಿಂದ ಇರಿದು (ಕ್ರಿಶ 72ರಲ್ಲಿ) ಕೊಲ್ಲುತ್ತದೆ.[7]

ಇವರ ಮರಣದ ನಂತರದಿಂದ ನಾಲ್ಕುವರೆ ಶತಮಾನಗಳ ಕಾಲದ ವರೆಗೆ, ಸುಮಾರು ಇಪ್ಪತ್ತು ವರುಷಗಳ ಸಂತ ತೋಮರ ಭಾರತದ ಜೀವಿತಕಾಲದಲ್ಲಿ ಅವರು ನೀಡಿದ ಉಪದೇಶಗಳ ಹಿನ್ನೆಲೆಯಲ್ಲಿ ಅಭಿವೃದ್ಧಿಪಡಿಸಿದ ಪೂಜಾ ಕ್ರಮಗಳ ಆಧಾರದಲ್ಲಿ ಪೂಜೆ, ಹುಟ್ಟು ಸಾವು, ಮದುವೆಗಳನ್ನು ಈ ಸಮುದಾಯ ನೆರವೇರಿಸಿಕೊಂಡು ಬರುತ್ತದೆ. ಸ್ವಾಭಾವಿಕವಾಗಿಯೇ ಈ ಸಮುದಾಯದ ಆಚಾರ ವಿಚಾರಗಳು. ಪೂಜೆ ಮತ್ತಿತರ ಆರಾಧನಾ ಕ್ರಮಗಳು ಯಹೂದಿ ಮತ್ತು ಭಾರತೀಯ ಆರಾಧನಾ ಕ್ರಮಗಳಿಂದ ಪ್ರೇರಿತವಾದವು ಎನ್ನುವುದರಲ್ಲಿ ಸಂಶಯವಿಲ್ಲ[8]. ಈ ಕುರಿತಾದ ದಾಖಲೆಗಳನ್ನು ಪೋರ್ಚಗೀಸರು ಸುಟ್ಟು ಹಾಕಿರುವುದು ದೌರ್ಭಾಗ್ಯವೇ ಸರಿ[9]. ಚೇರ ರಾಜರುಗಳ ವಿಶ್ವಾಸಗಳಿಸಿದ್ದ ಈ ಸಮುದಾಯ ಕರಿಮೆಣಸಿನ ಕೃಷಿ ಹಾಗೂ ಕರಿಮೆಣಸಿನ ವ್ಯಾಪಾರದ ಹಿಡಿತವನ್ನು ಹೊಂದಿತ್ತು. ಈ ಕಾರಣದಿಂದ ಇವರು ನಿರಂತರವಾಗಿ ವಿದೇಶಿ ವ್ಯಾಪಾರಿಗಳ ಸಂಪರ್ಕದಲ್ಲಿದ್ದರು. ಕೊಡುಂಗಲ್ಲೂರು ಅ ಕಾಲದ ಮುಖ್ಯ ರೇವು ಪಟ್ಟಣ, ಸಿಹಿ ನೀರು, ಆಹಾರ ಧಾನ್ಯಗಳು ಮತ್ತು ಸಾಂಬಾರ ಪದಾರ್ಥಗಳಿಗಾಗಿ ಇಲ್ಲಿಗೆ ವಿದೇಶೀ ಹಡಗುಗಳ ಭೇಟಿ ನಿರಂತರವಾಗಿತ್ತು.

ನಾಲ್ಕನೇಯ ಶತಮಾನದ ಮಧ್ಯಭಾಗದಲ್ಲಿ ತೋಮಸ್‌ಕ್ಯಾನ ಎಂಬ ಸಿರಿಯನ್ ವ್ಯಾಪಾರಿ ತನ್ನ ಈ ಭಾಗದ ವ್ಯಾಪಾರ ಸಂಬಂಧಿ ಪ್ರವಾಸದಲ್ಲಿ ಇಲ್ಲೊಂದು ಕ್ರೈಸ್ತ ಸಮುದಾಯ ಇರುವುದು ಮತ್ತು ಅದು ತನ್ನ ಸಮುದಾಯಕ್ಕಿಂತ ಭಿನ್ನವಾಗಿರುವುದನ್ನು ಗಮನಿಸುತ್ತಾನೆ. ಈ ಭಿನ್ನತೆಯನ್ನು ಅದರ ಧಾರ್ಮಿಕ ದುಸ್ಥಿತಿಯಾಗಿ ಅರ್ಥೈಸಿ, ತನ್ನ ತಾಯ್ನಾಡಿಗೆ ಹಿಂದಿರುಗಿ, ಈ ಕುರಿತು ಅಲ್ಲಿನ ಕ್ರೈಸ್ತರೊಂದಿಗೆ ಸಮಾಲೋಚಿಸಿ, ಈ ಸಮುದಾಯದ ಧಾರ್ಮಿಕ ಏಳ್ಗೆಗಾಗಿ ಅಲ್ಲಿಂದ ಪುರೋಹಿತರನ್ನು ಒಳಗೊಂಡ ಅಪಾರ ಸಂಖ್ಯೆಯ ಸಿರಿಯನ್ನರೊಡನೆ ಕೊಡುಂಗಲ್ಲೂರಿಗೆ ವಲಸೆ ಬಂದನು ಎಂದು ಚರಿತ್ರೆಯಲ್ಲಿ ದಾಖಲಾಗಿದೆ. ಹೀಗೆ ವಲಸೆ ಬಂದವರು ಕೊಡುಂಗಲ್ಲೂರು ಸಮೀಪದ ಮಹಾದೇವರ್ ಪಟ್ಟಿನಮ್ ಎಂಬ

ಪಟ್ಟಣದ ದಕ್ಷಿಣ ಬೀದಿಯಲ್ಲಿ ನೆಲೆಸುತ್ತಾರೆ. (ಉತ್ತರದ ಬೀದಿಯಲ್ಲಿ ಸ್ಥಳೀಯ ಕ್ರೈಸ್ತರು ಅದಾಗಲೆ ನೆಲೆಸಿರುತ್ತಾರೆ) ಚೇರ ರಾಜ ಕೊನೆಯ ಪೆರುಮಾಳ್‌ರಿಂದ ಹಲವು ಸವಲತ್ತುಗಳನ್ನು ಪಡೆದುಕೊಂಡ ಈ ವಲಸಿತ ಗುಂಪು ಇಲ್ಲಿ ಒಂದು ದೇವಾಲಯವನ್ನು ನಿರ್ಮಿಸುತ್ತದೆ ಮತ್ತು ಕಾಳುಮೆಣಸು ಮತ್ತು ಇತರ ಸಾಂಬಾರ ವಸ್ತುಗಳ ವಿದೇಶಿ ವ್ಯಾಪಾರದಲ್ಲಿ ತೊಡಗುತ್ತಾರೆ. ಈ ಕುರಿತಾದ ವಿವರಗಳು ಕೊಟ್ಟಯಂನ ಮತ ಬೋಧನಾ ಕಾಲೇಜಿನಲ್ಲಿ ಸಂರಕ್ಷಿಸಿ ಇಡಲಾಗಿರುವ ಚೇರ ದೊರೆ ವೀರ ರಾಘವನ ತಾಮ್ರಪಟದ ಸನ್ನದಿನಲ್ಲಿ ಲಭ್ಯವಿದೆ[10]. ಮುಖ್ಯವಾಗಿ ಈ ವಲಸಿತರು ಉತ್ತರದ ಬೀದಿಯಲ್ಲಿ ನೆಲೆಸಿರುವ ಸಂತ ತೋಮರ ಶಿಷ್ಯರ ಹೊಸ ತಲೆಮಾರಿನೊಂದಿಗೆ ಯಾವುದೇ ಸಂಪರ್ಕವನ್ನು ಬೆಳೆಸುವುದಿಲ್ಲ. ಸ್ಥಳೀಯರೊಡನೆ ವಿವಾಹವನ್ನು ನಿರಾಕರಿಸುವ ಮೂಲಕ ತಮ್ಮ ಹಮ್ಮುಬಿಮ್ಮುಗಳನ್ನು ಕಾಪಾಡಿಕೊಳ್ಳುತ್ತಾರೆ[11]. ಸ್ಥಳೀಯ ಕ್ರೈಸ್ತ ಸಮುದಾಯದ ದುಸ್ಥಿತಿಯೇ ಈ ಸಮೂಹದ ವಲಸೆಯ ಪ್ರೇರಕ ಅಂಶವೆಂದು ದಾಖಲಾಗಿದ್ದರೂ, ಸ್ಥಳೀಯರನ್ನು ತಮ್ಮ ಗುಂಪಿನೊಡನೆ ಬೆರೆಯಲು ಬಿಡದಿರಲು ಕಾರಣಗಳೇನು ಎಂಬುವುದು ತಿಳಿದು ಬರುವುದಿಲ್ಲ. ಸಿರಿಯದಿಂದ ಪ್ರಸ್ತುತ ವಲಸೆ ನಡೆಯಲು ಕಾರಣವಾದ ಹೊರದಬ್ಬುವ ಕಾರಣಗಳು (push factors) ಏನೆಂದು ತಿಳಿಯದೇ ಇದ್ದರೂ, ಸೆಳೆತದ ಕಾರಣಗಳಲ್ಲಿ (pull factors) ಮುಖ್ಯವಾದುದು ಸಾಂಬಾರ ಪದಾರ್ಥಗಳ ವ್ಯಾಪಾರವೇ ಎಂದು ಅಂದಾಜಿಸಬಹುದು.

ಈ ಕಾಲ ಘಟ್ಟದಲ್ಲಿ ಜಾಗತಿಕವಾಗಿ ಕ್ರೈಸ್ತ ಧರ್ಮದೊಳಗೆ ದೈವಶಾಸ್ತ್ರೀಯ ವಿಚಾರಗಳಿಗೆ ಸಂಬಂಧಿಸಿದಂತೆ ಬಹುವಿಧದ ಚರ್ಚೆಗಳು ನಡೆಯುತ್ತಿದ್ದವು. ಏರಿಯಸ್ ಸಿದ್ಧಾಂತ, ಅಪೊಲಿನರಿಸ್ ಸಿದ್ಧಾಂತ, ನೆಸ್ಟೋರಿಯಸ್ ಸಿದ್ಧಾಂತ, ಯೂಟಿಕ್ಸನ ಸಿದ್ಧಾಂತ ಮೊದಲಾದ ಸಿದ್ಧಾಂತಗಳು ಅದರ ಪ್ರತಿಪಾದಕರ ನಡುವೆ ಉಗ್ರ ಸ್ವರೂಪದ ವಾದ ವಿವಾದಗಳು ನಡೆಯುತ್ತಿದ್ದವು. ಏಸು ಕ್ರಿಸ್ತರ ವಿವಿಧ ಶಿಷ್ಯರು ಪ್ರಪಂಚದ ವಿವಿಧ ಭಾಗಗಳಲ್ಲಿ ನೆಲೆ ನಿಂತು ಕ್ರೈಸ್ತ ಸಮುದಾಯಗಳನ್ನು ಕಟ್ಟಿದ್ದು, (ಜೆರುಸಲಾಮ್ ಕಾನ್ಸ್ಟಟಿನೊಪಲ್, ರೋಮ್, ಅಲೆಕ್ಸಾಂಡ್ರಿಯ, ಬ್ಯಾಬಿಲೋನಿಯ ಮತ್ತು ಅಂಡಿಯೋಕ್) ಅವರುಗಳ ಮರಣದ ತರುವಾಯದಲ್ಲಿ ಅವರ ಶಿಷ್ಯರ ನಡುವೆ ಸೈದಾಂತಿಕ ಭಿನ್ನಾಭಿಪ್ರಾಯಗಳು ತಲೆದೊರಿದವು. ಅವು ತೀರಾ ಅತಿರೇಕದ ಮಟ್ಟಕ್ಕೆ ಹೋದುದನ್ನೂ ಚರಿತ್ರೆಯಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಈ ಸಿದ್ಧಾಂತಗಳ ವಾದ ವಿವಾದಗಳು ಏಸು ಕ್ರಿಸ್ತರ ದೇವತ್ವ ಮತ್ತು ಮಾನವತ್ವಕ್ಕೆ ಸಂಬಂಧಿಸಿದ ದೈವಶಾಸ್ತ್ರೀಯ ವಿಚಾರಗಳ ಕುರಿತಾದ ಚರ್ಚೆಗಳಾಗಿದ್ದವು. ಸಿದ್ಧಾಂತಗಳ ಪ್ರತಿಪಾದಕರ ನಡುವೆ ತಮ್ಮ ಸಿದ್ಧಾಂತಗಳ ಹಿರಿಮೆಯ ಕುರಿತಾಗಿ ವಾಗ್ವಾದಗಳು ನಿರಂತರವಾಗಿದ್ದ ಕಾಲ ಅದು. ಆದರೆ ಈ ಸ್ಥಳೀಯ ಮಾರ್‌ತೋಮ ಕ್ರೈಸ್ತರನ್ನು ಇವ್ಯಾವುದೂ ತಟ್ಟಲಿಲ್ಲ. ಅಲ್ಲಿ ನಡೆಯುತ್ತಿದ್ದ ವಿಚಾರಗಳ ಬಗ್ಗೆ ಇವರಿಗೆ ಅರಿವೂ ಇರಲಿಲ್ಲ.

ಕ್ರಿ.ಶ 823ರಲ್ಲಿ ಸಿರಿಯದಿಂದ ಮಾರ್ ಸಪೋರ್[12] ಮತ್ತು ಮಾರ್‌ಏಪ್ರಟ್ ಎಂಬ ಇಬ್ಬರು ಧಾರ್ಮಿಕ ನಾಯಕರ ನೇತೃತ್ವದಲ್ಲಿ ಕೊಡುಂಗಲ್ಲೂರಿಗೆ ನಡೆಯುವ ದೊಡ್ಡ ಪ್ರಮಾಣದ ವಲಸೆಯ ವರೆಗೆ ಹೊರ ಜಗತ್ತಿನ ಕ್ರೈಸ್ತ ಧರ್ಮದ ಪರಿಚಯವಿಲ್ಲದೇ ಬೆಳೆದ ಈ ಸಮುದಾಯ ಅದಾಗಿಯೇ ರೂಪಿಸಿಕೊಂಡ ಪೂಜೆ, ಆರಾಧನಾ ಕ್ರಮ, ರೀತಿನೀತಿ, ಆಚಾರವಿಚಾರಗಳಿಂದ ತನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ತೀರಿಸಿಕೋಳ್ಳುತ್ತಿತ್ತು. ಮಾರ್ ಸಪೋರ್ ನೇತೃತ್ವದಲ್ಲಿ ನಡೆದ ವಲಸೆ ಈ ಸಮುದಾಯದ

ಮೇಲೆ ಸಾಂಸ್ಕೃತಿಕವಾಗಿ ಬೀರಿರುವ ಪ್ರಭಾವ ಅಪಾರ. ಎರಡು ಸಮುದಾಯಗಳ ಪೂರ್ಣವಾದ ಮಿಳಿತದಿಂದ ಉಗಮವಾದ ಸಮುದಾಯವೇ ಇಂದಿನ ಸಿರಿಯನ್ ಕ್ರೈಸ್ತ ಸಮುದಾಯ.

ಮಾರ್ ಸಪೋರ್ ನೇತೃತ್ವದ ವಲಸೆಯ 'ಹೊರದಬ್ಬುವಿಕೆಯ' ಹಾಗೂ 'ಒಳಸೆಳೆತದ' ಕಾರಣಗಳು ಕ್ರಮವಾಗಿ, ಸಿರಿಯದ ಮುಸ್ಲಿಂ ಆಳ್ವಿಕೆಯ ಧಾರ್ಮಿಕ ಪೀಡನೆಗಳು[13] ಮತ್ತು ಮಲಿಯಂಕರ(ಕೇರಳ) ಪ್ರದೇಶದಲ್ಲಿದ್ದ ಸಹಿಷ್ಣು ರಾಜ ಆಡಳಿತ, ವ್ಯಾಪಾರಕ್ಕಿರುವ ಅವಕಾಶಗಳು ಹಾಗೂ ಮಾರ್‌ತೋಮ ಕ್ರೈಸ್ತರಿಗೆ ರಾಜಾಡಳಿತದಲ್ಲಿದ್ದ ಸ್ಥಾನಮಾನಗಳು ಎಂಬುದು ನಿಚ್ಚಳವಾಗಿ ತಿಳಿದು ಬರುತ್ತದೆ. ವಲಸಿಗರಾಗಿ ಬಂದ ಇವರನ್ನು ಇಲ್ಲಿನ ಸ್ಥಳೀಯ ಕ್ರೈಸ್ತ ಸಮುದಾಯ ಆತ್ಮೀಯವಾಗಿ ಸ್ವಾಗತಿಸಿ ಅವರನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಧಾರ್ಮಿಕ ಪೀಡನೆಯಿಂದ ಅವರಿಗಾಗಿರುವ ಸಾವು ನೋವು ಮತ್ತು ಆರ್ಥಿಕ ನಷ್ಟ ವಲಸಿಗರನ್ನು ಸಹೃದಯಿಗಳಾದ ಸ್ಥಳೀಯರೆಡೆಗೆ ಆಕರ್ಷಿಸಿದರೆ, ವಲಸಿಗರ ಕ್ರೈಸ್ತ ಸಾಹಿತ್ಯ,[14] ಧರ್ಮಾಚರಣೆಯ ವಿಧಿವಿಧಾನಗಳು, ವಲಸಿಗ ಸಮುದಾಯದ ದೈವಶಾಸ್ತ್ರೀಯ ಅಡಿಪಾಯ, ಸ್ಥಳೀಯರನ್ನು ವಲಸಿರೆಡೆಗೆ ಸೆಳೆಯುತ್ತದೆ. ಮದುವೆಯಿಂದ ಪ್ರಾರಂಭಿಸಿ ಎಲ್ಲಾ ಬಗೆಯ ಪರಸ್ಪರ ಸಹಕಾರ ಈ ಎರಡು ಗುಂಪುಗಳ ನಡುವೆ ನಡೆಯುತ್ತದೆ. ಈ ಪರಸ್ಪರ ಕೊಡುಕೊಳ್ಳುವಿಕೆಯಿಂದಾಗಿ ಹೊಸದೊಂದು ಸಮುದಾಯ, ಸಂಸ್ಕೃತಿ ರೂಪುಗೊಳ್ಳುತ್ತದೆ. ಸಿರಿಯಕ್ ಭಾಷೆ, ಪೂಜಾಕ್ರಮಗಳ ಭಾಷೆಯಾಗಿ ನೆಲೆಗೊಳ್ಳುತ್ತದೆ. ಧರ್ಮಾಚರಣೆಯ ಸಂದರ್ಭದಲ್ಲಿ ಸ್ಥಳೀಯ ಆಚರಣೆಗಳು ಹಾಗೂ ವಲಸಿಗರ ಆಚರಣೆಗಳು ಮಿಳಿತವಾಗುತ್ತದೆ. ಹೇಗೆ ಎಲ್ಲಾ ಬಗೆಯಲ್ಲೂ ಬೆರೆತು ಈ ಎರಡು ಸಮುದಾಯಗಳು ಒಂದಾಗುತ್ತವೆ.

ಪೋರ್ಚುಗೀಸರು ಕೊಂಕಣತೀರ ಪ್ರದೇಶಕ್ಕೆ ಆಗಮನ ಆಗುವವರೆಗೆ ಸಿರಿಯನ್ ಕ್ರೈಸ್ತ ಸಮುದಾಯ ದೊಡ್ಡ ಸಮಸ್ಯೆಗಳಿಲ್ಲದೇ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು, ವ್ಯಾಪಾರ ವಹಿವಾಟುಗಳಲ್ಲಿ ಉನ್ನತಿ ಸಾಧಿಸುತ್ತಾ ಬೆಳೆದು ಬರುತ್ತದೆ. 7ನೇ ಶತಮಾನ ಮತ್ತು 18ನೇ ಶತಮಾನದ ನಡುವಿನ ಕಾಲ ಸಿರಿಯನ್ ಕ್ರೈಸ್ತ ಸಮುದಾಯದ ಕೀರ್ತಿ ಮತ್ತು ಸಮೃದ್ಧಿಯ ಉತ್ತುಂಗದ ಕಾಲವಾಗಿತ್ತು.[15] ತಮ್ಮವನೇ ಆದ ಒರ್ವ ದೊರೆ ಅವರಿಗಿದ್ದ. ಉದಯಮ್ ಪೆರೂರು ಬಳಿಯ ವಿಲ್ಲಿಯಾರ್‌ವತ್ತಮ್ ಇವರ ರಾಜಧಾನಿಯಾಗಿತ್ತು. 14ನೇ ಶತಮಾನದಲ್ಲಿ ಈ ರಾಜವಂಶ ಕಣ್ಮರೆಯಾದಂತೆ ತೋರುತ್ತದೆ. ತದನಂತರದಲ್ಲೂ ಇವರ ಅಚಾರ ವಿಚಾರಗಳಲ್ಲಿ, ವ್ಯಾಪಾರ ವಹಿವಾಟುಗಳಲ್ಲಿ ದೊಡ್ಡ ಸಮಸ್ಯೆಯೇನೂ ಇರುವುದಿಲ್ಲ. ಪೋರ್ಚುಗೀಸರ ಆಗಮನದ ಕಾಲಕ್ಕಾಗಯವಾಗ ಇಲ್ಲಿನ ವ್ಯಾಪಾರ ಇವರ ಬಳಿರಿಂದ ಮೂರ್‍ಗಳ ಹತೋಟಿಗೆ ಹೋಗಿತ್ತು. ಮೂರ್‌ಗಳಿಗೆ ಹಿಂದು ಹಾಗು ಕ್ರೈಸ್ತ ವ್ಯಾಪಾರಿಗಳ ಬಗ್ಗೆ ಒಲವಿರಲಿಲ್ಲ. ಈ ಕಾರಣಕ್ಕೆ ಹಿಂದು ಮತ್ತು ಕ್ರೈಸ್ತ ವ್ಯಾಪಾರಿಗಳು ಪೋರ್ಚುಗೀಸರ ಆಗಮನವನ್ನು ಆತ್ಮೀಯವಾಗಿ ಸ್ವಾಗತಿಸಿದ್ದರು. ಸಿರಿಯನ್ ಕ್ರೈಸ್ತ ಸಮುದಾಯವಂತೂ ತಮ್ಮ ರಾಜನ ಕಿರೀಟ ಮತ್ತು ರಾಜದಂಡವನ್ನು ಪೋರ್ಚುಗೀಸರಿಗೆ ಒಪ್ಪಿಸುತ್ತಾರೆ.[16] ತಮ್ಮ ಗತಕಾಲದ ವೈಭವನ್ನು ಹಿಂಪಡೆಯಲು ಸ್ವಧರ್ಮಿಯರಾದ ಪೋರ್ಚುಗೀಸರು ಸಹಕರಿಸುತ್ತಾರೆ ಎಂದು ಸಿರಿಯನ್ನರು ಅಲೋಚಿಸಿದ್ದಿರಬೇಕು. ಅದರೆ ಪೋರ್ಚುಗೀಸರ ಮತ್ತು ಸಿರಿಯನ್ ಕ್ರೈಸ್ತರ ನಡುವಿನ ಸಂಬಂಧ ಬಹಳ ಬೇಗನೇ ನಶಿಸುತ್ತದೆ. ತಮ್ಮ ಪೂಜಾ ಕ್ರಮಗಳಿಂದ ಭಿನ್ನವಾದ ಪೂಜಾ ವಿಧಾನಗಳನ್ನು ಅನುಸರಿಸುತ್ತಿದ್ದ, ರೋಮಿಗೆ ವಿಧೇಯರಲ್ಲದ ಈ ಸಮುದಾಯವನ್ನು ರೋಮಿನ ತೆಕ್ಕೆಗೆ ತರಲು ಪೋರ್ಚುಗೀಸರು ನಡೆಸುವ ಚಟುವಟಿಕೆಗಳ ಕ್ರೌರ್ಯದ ಮುಂದೆ ಇಡೀಯ

ಸಮುದಾಯ ನಲುಗಿ ಹೋಗುತ್ತದೆ. ಸಿರಿಯನ್ ಸಮುದಾಯದ ಆರ್ಥಿಕ ಬಲವನ್ನು ಕುಗ್ಗಿಸಲಾಗುತ್ತದೆ. ಸಮುದಾಯದ ನಡುವಿನ ಒಗ್ಗಟ್ಟನ್ನು ಒಡೆಯಲಾಗುತ್ತದೆ. ಅವರ ಧರ್ಮ ಗ್ರಂಥಗಳನ್ನು, ಪೂಜಾ ವಿಧಿವಿಧಾನಗಳ ಪುಸ್ತಕಗಳನ್ನು, ಚಾರಿತ್ರಿಕ ದಾಖಲೆಗಳನ್ನು ಬೆಂಕಿಯಲ್ಲಿ ಹಾಕಿ ಸುಡಲಾಗುತ್ತದೆ[17]. ಸಮುದಾಯದ ಕೋರಿಕೆಯ ಮೇರೆಗೆ ಸಿರಿಯದಿಂದ ಬಂದ ಧರ್ಮಗುರು ಅಹತ್ತಲ ಎಂಬವರನ್ನು ಪೋರ್ಚಗೀಸರು ಕೊಲ್ಲುವುದರೊದಿಂಗೆ ಸಿರಿಯನ್ ಕೈಸ್ತರ ಕೋಪದ ಕಟ್ಟೆ ಒಡೆಯುತ್ತದೆ. ಪೋರ್ಚಗೀಸರ ವಿರುದ್ಧ ಸಮರ ಸಾರಲು ಇದು ತಕ್ಷಣದ ಕಾರಣವಾಗುತ್ತದೆ.

1653ರಲ್ಲಿ ಕೋಚ್ಚಿನಿನ ಮಟ್ಟಾಂಚೇರಿಯಲ್ಲಿ 40000 ಸಾವಿರದಷ್ಟು ಆಯುಧಧಾರಿಗಳಾದ ಸಿರಿಯನ್ ಕ್ರೈಸ್ತರು ಪೋರ್ಚಗೀಸರ ವಿರುದ್ಧವಾಗಿ ಗುಪ್ತಸಭೆ ಸೇರುತ್ತಾರೆ[18], ಯೂರೋಪಿಯನ್ನರ ದಿಸೆಯಿಂದ ಅಗುತ್ತಿರುವ ಅವಮಾನ, ಆರ್ಥಿಕ ಹಾನಿ, ನಂಬಿದವರಿಗೆ ಮೋಸ ಮಾಡುವ ಅವರ ಸ್ವಭಾವ, ತಮ್ಮ ನಡುವೆ ಒಡಕು ತರಲು ನಡೆಸಿದ ಅವರ ಪ್ರಯತ್ನಗಳು, ಕೊನೆಗೆ ತಮ್ಮ ಧರ್ಮಗುರುವನ್ನು ಸಾಯಿಸಿದ್ದು, ಇವೆಲ್ಲಾ ಸಿರಿಯನ್ನರ ಪೋರ್ಚಗೀಸರ ವಿರುದ್ದದ ಸಿಟ್ಟಿಗೆ ಕಾರಣಗಳು. ಸನ್ನಿವೇಶದ ಗಂಭೀರತೆ ಅರಿತ ಕೊಚ್ಚಿಯ ರಾಜ ಮತ್ತು ಸಿರಿಯನ್ ಕ್ರೈಸ್ತ ಸಮುದಾಯದ ಗುರು ಆರ್ಚಡೀಕನ್ ಕ್ರೋಧದಿಂದ ಉರಿಯುತ್ತಿದ್ದ ಗುಂಪನ್ನು ಸಮಾಧಾನಿಸಲು ಪ್ರಯತ್ನಿಸುತ್ತಾರೆ. ರಾಜನ ಮತ್ತು ಧರ್ಮಗುರುವಿನ ಮಾತನ್ನು ಮೀರಲು ಸಮುದಾಯಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ಸಂಭವನೀಯ ಅನಾಹುತವೊಂದು ತಪ್ಪುತ್ತದೆ. ಕೊನೆಗೆ ಸಮುದಾಯ ಮುಂದಕ್ಕೆ ಯೂರೋಪಿಯನ್ನರ ಜೊತೆ ಯಾವುದೇ ಬಗೆಯ ಸಂಬಂಧ ಇಟ್ಟುಕೊಳ್ಳುವುದಿಲ್ಲ ಎಂದು ಅಲ್ಲೆ ಪಕ್ಕದಲ್ಲಿದ್ದ ಕಲ್ಲಿನ ಶಿಲುಬೆಗೆ ಉದ್ದಕ್ಕೆ ಹಗ್ಗ ಕಟ್ಟಿ ಎಲ್ಲರೂ ಹಗ್ಗ ಹಿಡಿದು ಪ್ರತಿಜ್ಞೆ ಮಾಡುತ್ತಾರೆ. ಈ ಶಿಲುಬೆ ಒಂದು ಪಾರ್ಶ್ವಕ್ಕೆ ಬಾಗಿದ್ದಾಗಿದ್ದುದರಿಂದ ಶಿಲುಬೆಯನ್ನು bent ceoss ಎಂದು ಕರೆಯುತ್ತಿದ್ದರು, ಈ ಘಟನೆಯನ್ನು oath on the best cross ಎಂದು ಕರೆಯಲಾಗುತ್ತದೆ. ಭಾರತದ ಚರಿತ್ರೆಯಲ್ಲಿ ಯೂರೋಪಿಯನ್ನರ ವಿರುದ್ದದ ಪ್ರಥಮ ಹೋರಾಟವಿದು. ಇದು ಸಿರಿಯನ್ ಸಮುದಾಯ ಮತ್ತು ಯೂರೋಪಿಯನ್ನರ ನಡುವಿನ ಹೋರಾಟದ ಪ್ರಾರಂಭ ಮಾತ್ರ. ಅದು 1947ರ ವರೆಗೂ ಮುಂದುವರಿಯುತ್ತದೆ. ಯೂರೋಪಿಯನ್ನರ ನಿರಂತರ ದಬ್ಬಾಳಿಕೆಯ ಹೊರತಾಗಿಯೂ ಸಿರಿಯನ್ ಕ್ರೈಸ್ತ ಸಮುದಾಯ ತನ್ನ ಅಸ್ಮಿತೆಯನ್ನು ಉಳಿಸಿರುವುದನ್ನು ಇಂದೂ ಕಾಣಬಹುದಾಗಿದೆ.

**ಕೊನೆಟಿಪ್ಪಣಿಗಳು**


1. ಎಡ್ಗರ್ ಥರ್ಸ್ಟನ್, ಕೆ. ರಂಗಾಚಾರಿ. (1909). ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು, ಸಂ–6 (ಕನ್ನಡ ಅನುವಾದ–2019) ಕುವೆಂಪು ಭಾಷಾಭಾರತಿ ಪ್ರಾಧಿಕಾರ. ಪು.424
2. ಮುಂಡಡನ್. (1984). ಹಿಸ್ಟರಿ ಅಫ್ ಕ್ರಿಸ್ತೀಯಾನಿಟಿ ಇನ್ ಇಂಡಿಯ–ಸಂ1. ತಿಯೊಯೋಜಿಕಲ್ ಪಬ್ಲಿಕೇಶನ್ ಇನ್ ಇಂಡಿಯ. ಪು 52
3. ಎಡ್ಗರ್ ಥರ್ಸ್ಟನ್, ಕೆ ರಂಗಾಚಾರಿ (1909). ಪೂರ್ವೋಕ್ತ. ಪು.424.
4. ಮುಂಡಡನ್. (1984). ಪೂರ್ವೋಕ್ತ. ಪು. 16
5. ಅದೇ. ಪು. 16

6. ಎಡ್ಗರ್ ಥರ್ಸ್ಟನ್, ಕೆ ರಂಗಾಚಾರಿ (1909) ಪೂರ್ವೋಕ್ತ. ಪು.424
7. ಅದೇ. ಪು. 424
8. ಫರ್ತ್ ಸಿ ಬಿ. (1961). ಆ್ಯನ್ ಇಟ್ರಡಕ್ಷನ್ ಟು ಇಂಡಿಯನ್ ಚರ್ಚ್ ಹಿಸ್ಟರಿ. ದಿ ಕ್ರಿಸ್ಟಿಯನ್ ಲಿಟೆರೆಚರ್ ಸೊಸೈಟಿ. ಪು. 15
9. ಎಡ್ಗರ್ ಥರ್ಸ್ಟನ್, ಕೆ, ರಂಗಾಚಾರಿ. (1909). ಪೂರ್ವೋಕ್ತ. ಪು. 424
10. ಶರ್ಮ, ಆರ್.ಎಸ್. (2012.) ಇಂಡಿಯ'ಸ್ ಅನ್ಸಿಯೆಂಟ್ ಪಾಸ್ಟ್ (ದಿ ಡಾನ್ನ ಆ ಹಿಸ್ಟರಿ ಇನ್ ಡೀಪ್ ಸೌತ್) ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.
11. ಎಡ್ಗರ್ ಥರ್ಸ್ಟನ್, ಕೆ ರಂಗಾಚಾರಿ. (1909). ಪೂರ್ವೋಕ್ತ. ಪು.424
12. ಮಾರ್ ಎಂಬುದು ಸಿರಿಯಕ್ ಭಾಷೆಯ ಪದ. ಇದರ ಅರ್ಥ Respected My Lord ಎಂದಾಗುತ್ತದೆ. ಸಂತರ, ಬಿಷಪ್‌ಗಳ ಹೆಸರುಗಳ ಮುಂದೆ ಬಳಸುತ್ತಾರೆ.
13. ಸಿರಿಯದ ದೇಶದ ಇತಿಹಾಸ ರಕ್ತಸಿಕ್ತವಾದ ಹೋರಾಟದ ಇತಿಹಾಸವಾಗಿದೆ. ಅದರ ಮುಂದುವರಿಕೆಯೇ ಇಂದು ಸಿರಿಯದಲ್ಲಿ ಕಾಣುತ್ತಿರುವುದು.
14. ಸಿರಿಯ ಒಂದು ಕಾಲದಲ್ಲಿ ಕ್ರೈಸ್ತ ಧರ್ಮದ ಮುಖ್ಯ ಕೇಂದ್ರಗಳಲ್ಲಿ ಒಂದಾಗಿದ್ದು ಎರಡನೇ ಶತಮಾನದ ಆದಿಯಲ್ಲೇ ಬೈಬಲ್ ಸಿರಿಯನ್ ಭಾಷೆಗೆ ಭಾಷಾಂತರವಾಗಿತ್ತು.
15. ಎಡ್ಗರ್ ಥರ್ಸ್ಟನ್, ಕೆ ರಂಗಾಚಾರಿ. (1909). ಪೂರ್ವೋಕ್ತ. ಪು. 440
16. ಅದೇ. ಪು 440
17. ಅದೇ. ಪು 441
18. ಫರ್ತ್ ಸಿ ಬಿ. (1961). ಪೂರ್ವೋಕ್ತ. ಪು. 85